ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालयः
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

ಸಂಖ್ಯೆ: ಕಸಂವಿ/ಪರೀಕ್ಷಾಂಗ/ಸಂ.ಸ್ನಾ ಹಾಗೂ ಸ್ನಾ.ಪ–/2025–26 ದಿನಾಂಕ: 28.10.2025

# ಅಧಿಸೂಚನೆ

ವಿಷಯ : 2025–26ನೆಯ ಸಾಲಿನಲ್ಲಿ ನಡೆಯಲಿರುವ ಸ್ನಾತಕ ಹಾಗೂ ಸ್ನಾತಕೋತ್ತರ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಕುರಿತು –

ಉಲ್ಲೇಖ : ಮಾನ್ಯ ಕುಲಪತಿಗಳ ಅನುಮೋದನೆ ಕಂಡಿಕೆ ಸಂಖ್ಯೆ : 04 ; ದಿನಾಂಕ :27.10.2025

2025–26ನೆಯ ಸಾಲಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಪರಿಸರದ ಹಾಗೂ ಮಾನ್ಯತೆಗೊಳಪಟ್ಟ ಸಂಸ್ಕೃತ ಮಹಾವಿದ್ಯಾಲಯಗಳ ವೇದ ಹಾಗೂ ಶಾಸ್ತ್ರ ವಿಭಾಗಗಳ ಸ್ನಾತಕ ಪ್ರಥಮ, ತೃತೀಯ, ಪಂಚಮ ಹಾಗೂ ಸ್ನಾತಕೋತ್ತರ ಪ್ರಥಮ, ತೃತೀಯ ಷಾಣ್ಮಾಸಿಕ ತರಗತಿಗಳ Freshers ಹಾಗೂ Repeaters ಅರ್ಹ ವಿದ್ಯಾರ್ಥಿಗಳಿಂದ ಪರೀಕ್ಷಾ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ. | ವಿವರಗಳು | ದಿನಾಂಕ |
|---|---|---|
| 1 | ವಿದ್ಯಾರ್ಥಿಗಳು "uucms.karnataka.gov.in" ಮೂಲಕ ಪರೀಕ್ಷಾ ಅರ್ಜಿ ತುಂಬಿ ಶುಲ್ಕ ಪಾವತಿಸಲು : | 28.10.2025 ರಿಂದ 15.11.2024 |
| 2 | ದಂಡ ಶುಲ್ಕ ರೂ.100 ರೊಂದಿಗೆ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ : | 17.11.2025 |
| 3 | ದಂಡ ಶುಲ್ಕ ರೂ.200 ರೊಂದಿಗೆ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ : | 18.11.2025 |
| 4 | ಅಧ್ಯಾಪಕರು IA (Internal Assessment) ಆಂತರಿಕ ಅಂಕಗಳನ್ನು ಹಾಗೂ ಹಾಜರಾತಿಯನ್ನು uucms ಮೂಲಕ ನಮೂದಿಸಲು ದಿನಾಂಕ : | 28.10.2025 ರಿಂದ 30.11.2025 |
| 5 | ಪ್ರಾಂಶುಪಾಲರು ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾದ ದಿನಾಂಕ: | 08.12.25 ಮತ್ತು 09.12.2025 |
| 6 | ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ಸಂಭಾವ್ಯ ದಿನಾಂಕ : | 17.12.2025 |

**ವಿಶೇಷ ಸೂಚನೆ**

ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸುವ ಮೊದಲು UUCMS ನಲ್ಲಿ ಪ್ರವೇಶಾತಿ ಪ್ರಕ್ರಿಯೆ ಪೂರ್ಣಗೊಂಡಿರಬೇಕು, Course registration ಮಾಡಿಕೊಂಡಿರಬೇಕು, ವಿದ್ಯಾರ್ಥಿಗಳು ಆಯ್ಕೆ ಮಾಡಿದ ಪತ್ರಿಕೆಯನ್ನು ಪ್ರಾಂಶುಪಾಲರು ಪರಿಶೀಲಿಸಿ Approve ಮಾಡಿರಬೇಕು. ಇವಿಷ್ಟು ಪ್ರಕ್ರಿಯೆಗಳು ಪೂರ್ಣಗೊಂಡಿಲ್ಲದಿದ್ದರೆ ಪರೀಕ್ಷಾ ಶುಲ್ಕ ಪಾವತಿಸಲು ಸಾಧ್ಯವಾಗುವುದಿಲ್ಲ.

Registrar (Evaluation)
Karnataka Samskrita Vishwavidyalaya

√

## ಪರೀಕ್ಷಾ ಶುಲ್ಕಗಳ ವಿವರ

| ಕ್ರ. ಸಂ. | ಪರೀಕ್ಷೆಗಳ ವಿವರ | ಪರೀಕ್ಷಾ ಶುಲ್ಕ |
|---|---|---|
| 1. | ಸಂಸ್ಕೃತ/ವೇದ ಸ್ನಾತಕ ಪ್ರಥಮ ಷಾಣ್ಮಾಸಿಕ | 400/- |
| 2. | ಸಂಸ್ಕೃತ/ವೇದ ಸ್ನಾತಕ ತೃತೀಯ ಷಾಣ್ಮಾಸಿಕ | 450/- |
| 3. | ಸಂಸ್ಕೃತ/ವೇದ ಸ್ನಾತಕ ಪಂಚಮ ಷಾಣ್ಮಾಸಿಕ | 500/- |
| 4. | ಸಂಸ್ಕೃತ/ವೇದ ಸ್ನಾತಕೋತ್ತರ ಪ್ರಥಮ ಹಾಗೂ ತೃತೀಯ ಷಾಣ್ಮಾಸಿಕ | 700/- |
| 5. | ಸ್ನಾತಕ ಮತ್ತು ಸ್ನಾತಕೋತ್ತರ – ಪ್ರಥಮ ದಂಡಶುಲ್ಕದೊಂದಿಗೆ* | ಪರೀಕ್ಷಾ ಶುಲ್ಕ +100.00 |
| 6. | ಸ್ನಾತಕ ಮತ್ತು ಸ್ನಾತಕೋತ್ತರ – ದ್ವಿತೀಯ ದಂಡಶುಲ್ಕದೊಂದಿಗೆ | ಪರೀಕ್ಷಾ ಶುಲ್ಕ +200.00 |
| 7. | ಪುನರಾವರ್ತಿತ – ಸ್ನಾತಕ 1,3,5 ನೆಯ ಷಾಣ್ಮಾಸಿಕ | ಒಂದು ಪತ್ರಿಕೆಗೆ – ರೂ.200.00<br>ಒಂದಕ್ಕಿಂತ ಹೆಚ್ಚು ಪತ್ರಿಕೆ ಇದ್ದಲ್ಲಿ ಪೂರ್ಣ ಶುಲ್ಕವನ್ನು ಭರಿಸುವುದು. |
| 8 | ಪುನರಾವರ್ತಿತ* – ಸ್ನಾತಕೋತ್ತರ 1 ಮತ್ತು 3 ನೆಯ ಷಾಣ್ಮಾಸಿಕ | ಒಂದು ಪತ್ರಿಕೆಗೆ – ರೂ. 200.00<br>ಒಂದಕ್ಕಿಂತ ಹೆಚ್ಚು ಪತ್ರಿಕೆ ಇದ್ದಲ್ಲಿ – ರೂ.700.00 |

ಸೂಚನೆಗಳು :

1. ಶುಲ್ಕ ವಿನಾಯಿತಿಗೆ ಅರ್ಹರಾದ ವಿದ್ಯಾರ್ಥಿಗಳು ಪೂರ್ಣ ಶುಲ್ಕವನ್ನು UUCMS ಮೂಲಕ ಪಾವತಿಸಿ ಸಂಬಂಧಿಸಿದ ಇಲಾಖೆಗೆ ನಿಯಮಾನುಸಾರ ರಶೀದಿಯನ್ನು ಸಲ್ಲಿಸಿ ವಿನಾಯಿತಿ ಪಡೆದುಕೊಳ್ಳಬಹುದಾಗಿದೆ.
2. 2022-23 ನೇ ಸಾಲಿಗಿಂತಲೂ ಹಿಂದಿನ ಸಾಲಿನಲ್ಲಿ ಪ್ರವೇಶ ಪಡೆದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಹಾಗೂ 2020-21ನೇ ಸಾಲಿಗಿಂತಲೂ ಹಿಂದಿನ ಸಾಲಿನಲ್ಲಿ ಪ್ರವೇಶ ಪಡೆದ ಸ್ನಾತಕ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶವಿರುವುದಿಲ್ಲ.
3. ಪರೀಕ್ಷಾ ಶುಲ್ಕವನ್ನು ಯಾವ ಕಾರಣದಿಂದಲೂ ಮರುಪಾವತಿ ಮಾಡಲಾಗುವುದಿಲ್ಲ ಮತ್ತು ಅದನ್ನು ಮುಂದಿನ ಪರೀಕ್ಷೆಗಳಿಗೂ ಸರಿದೂಗಿಸಿಕೊಳ್ಳಲಾಗುವುದಿಲ್ಲ.
4. ವಿದ್ಯಾರ್ಥಿಗಳು "uucms.karnataka.gov.in" ಮುಖಾಂತರವೇ ವಿದ್ಯಾರ್ಥಿಗಳ ಪೋರ್ಟಲ್‌ನಲ್ಲಿ ಪರೀಕ್ಷಾ ಶುಲ್ಕಗಳನ್ನು ಪಾವತಿಸಬೇಕು, ಬೇರೆ ಯಾವುದೇ ಮಾಧ್ಯಮದಲ್ಲಿ ಅಂದರೆ DD ಅಥವಾ SBI Payement Gateway ಇತ್ಯಾದಿ ಮಾಧ್ಯಮದಲ್ಲಿ ಪಾವತಿಸಿದಲ್ಲಿ ಮಾನ್ಯ ಮಾಡಲಾಗುವುದಿಲ್ಲ.

Registrar (Evaluation)
Karnataka Samskrita Vishwavidyalaya

7

5. ಯಾವುದೇ ಅನುದಾನಿತ/ಅನುದಾನರಹಿತ ಸಂಸ್ಕೃತ ಪಾಠಶಾಲೆ / ಕಾಲೇಜಿನಲ್ಲಿ ಖಾಯಂ ಆಗಿ ಉದ್ಯೋಗದಲ್ಲಿರುವವರು / ಕಸಂವಿ ಪ್ರಶಾಸನ ಹಾಗೂ ಪ್ರಶಿಕ್ಷಣ ಸಮಿತಿಯ ಸದಸ್ಯರು/ಪಿ.ಹೆಚ್.ಡಿ-ವಿದ್ಯಾವಾರಿಧಿ ವಿದ್ಯಾರ್ಥಿಗಳು ಯಾವುದೇ ಕಾಲೇಜಿನಲ್ಲಿ ಪ್ರವೇಶಾತಿ ಪಡೆದು ಪರೀಕ್ಷೆ ತೆಗೆದುಕೊಳ್ಳುವಂತಿಲ್ಲ.

ಹಾಜರಾತಿ ವಿಚಾರ :

ಪ್ರತಿ ಪತ್ರಿಕೆಯಲ್ಲಿ ಕನಿಷ್ಠ ಶೇಕಡ 75 ರಷ್ಟು ಹಾಜರಾತಿಯನ್ನು ಕಡ್ಡಾಯವಾಗಿ ವಿದ್ಯಾರ್ಥಿಗಳು ಹೊಂದಿರಬೇಕು. ವಿದ್ಯಾರ್ಥಿಗಳ ಹಾಜರಾತಿ ಪಟ್ಟಿಯಲ್ಲಿ ತರಗತಿ ಮಾಡಿದ ಅಧ್ಯಾಪಕರ ಹಸ್ತಾಕ್ಷರ ಹಾಗೂ ಮಾಸಾಂತ್ಯದಲ್ಲಿ ಪ್ರಾಂಶುಪಾಲರ/ವಿಭಾಗಾಧ್ಯಕ್ಷರ ಹಸ್ತಾಕ್ಷರವು ಕಡ್ಡಾಯವಾಗಿರುತ್ತದೆ. ಯಾವುದೇ ಸಂದರ್ಭದಲ್ಲಿಯೂ ಪರೀಕ್ಷಾಂಗವು ಹಾಜರಾತಿ ಕುರಿತಾದ ದಾಖಲೆಯನ್ನು ಕೇಳಬಹುದಾಗಿದ್ದು, ಅಂತಹ ಸಂದರ್ಭದಲ್ಲಿ ಪ್ರಾಂಶುಪಾಲರು/ವಿಭಾಗಾಧ್ಯಕ್ಷರು/ಅಧ್ಯಯನಾಂಗವು ಇದನ್ನು ದೃಢೀಕರಿಸಿ ಪರೀಕ್ಷಾಂಗಕ್ಕೆ ಸಲ್ಲಿಸಬೇಕಾಗುವುದು.

1 ಕ್ರೆಡಿಟ್ = 16 ಘಂಟೆಗಳ ಬೋಧನಾವಧಿಯಾಗಿರುತ್ತದೆ. ಆದ್ದರಿಂದ ಪ್ರತಿ ಪತ್ರಕ್ಕೆ ನಿಗದಿಪಡಿಸಿದ ಕ್ರೆಡಿಟ್ ಗೆ ಅನುಗುಣವಾಗಿ ಒಟ್ಟು ಬೋಧನಾವಧಿಯು ಪ್ರತಿ ವಿಷಯದಲ್ಲಿಯೂ ಇರತಕ್ಕದ್ದು ಹಾಗೂ ಬೋಧನೆಯು ನಡೆದಿರಬೇಕು. ಪ್ರತಿ ಪತ್ರಿಕೆಯಲ್ಲಿ ಒಟ್ಟು ನಡೆದ ಬೋಧನಾವಧಿಯಲ್ಲಿ ಕನಿಷ್ಠ ಶೇಕಡ 75 ರಷ್ಟು ಹಾಜರಾತಿ ಹೊಂದಿದ ವಿದ್ಯಾರ್ಥಿಯು ಮಾತ್ರ ಪರೀಕ್ಷೆ ಬರೆಯಲು ಅರ್ಹನಾಗಿರುತ್ತಾನೆ.

| ಕ್ರೆಡಿಟ್ ಸಂಖ್ಯೆ | ಬೋಧನಾವಧಿ | ಕನಿಷ್ಠ ಹಾಜರಾತಿ ಅವಧಿ |
|---|---|---|
| 01 | 16 | 12 |
| 02 | 32 | 24 |
| 03 | 48 | 36 |
| 04 | 64 | 48 |

ಆಂತರಿಕ ಅಂಕ ವಿಚಾರ :

| ಪ್ರೋಗ್ರಾಮ್ ಮತ್ತು ಸೆಮಿಸ್ಟರ್ | ಸ್ಕೀಮ್ ನ ಹೆಸರು | ಗರಿಷ್ಠ | ಕನಿಷ್ಠ |
|---|---|---|---|
| BA/BSc I & III Sem | KSU SEP 24-25 | 20 | 08 |
| BA/BSc V Sem | KSU NEP 22-23 | 40 | 16 |
| MA/MScI & III Sem | KSU PG 24-25 | 30 | 12 |

1) ಸ್ಕೀಮ್‌ನ್ನು ಸರಿಯಾಗಿ ಗಮನಿಸಿ ಆಂತರಿಕ ಅಂಕಗಳನ್ನು ನೀಡಬೇಕು. ಬೇರೆ ಬೇರೆ ಸ್ಕೀಮ್ ಗಳಲ್ಲಿ ಆಂತರಿಕ ಅಂಕಗಳ ವಿಭಾಗ ಕ್ರಮ ವ್ಯತ್ಯಾಸವಿರುವುದನ್ನು ಗಮನಿಸಿಕೊಳ್ಳುವುದು.

2) ಆಂತರಿಕ ಅಂಕಗಳನ್ನು ಮ್ಯಾಪ್ ಮಾಡುವಾಗ ಗರಿಷ್ಠಾಂಕವನ್ನು ಕೋಷ್ಠಕದಲ್ಲಿ ನೀಡಿದಂತೆಯೇ ನಿಡಬೇಕು.

28/10/24

Registrar (Evaluation)
Karnataka Samskrita Vishwavidyalaya
Bengaluru - 560 018.

3) ಆಂತರಿಕ ಅಂಕಗಳು ಒಟ್ಟು ಸೇರಿದಾಗ ಕನಿಷ್ಠಾಂಕಕ್ಕಿಂತ ಕಡಿಮೆ ಬಂದಲ್ಲಿ, ಲೇಖನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದರೂ ಒಟ್ಟು ಫಲಿತಾಂಶದಲ್ಲಿ ಆ ವಿದ್ಯಾರ್ಥಿಯು ಅನುತ್ತೀರ್ಣನಾಗುತ್ತಾನೆ. ಬರವಣಿಗೆಯ ಪರೀಕ್ಷೆಯಂತೆ ಆಂತರಿಕ ಅಂಕದಲ್ಲಿಯೂ ನಿಗದಿಪಡಿಸಿದ ಕನಿಷ್ಠಾಂಕಗಳನ್ನು ಪಡೆದರೆ ಮಾತ್ರ ವಿದ್ಯಾರ್ಥಿಯು ತೇರ್ಗಡೆ ಹೊಂದುತ್ತಾನೆ.

4) ವಿಶ್ವವಿದ್ಯಾಲಯವು ಅಂತಿಮ ಫಲಿತಾಂಶವನ್ನು ಪ್ರಕಟಿಸಿದ ನಂತರ ಆಂತರಿಕ ಅಂಕಗಳನ್ನು ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

5) ವೇದ ವಿಭಾಗದಲ್ಲಿಯೂ ಎಲ್ಲ ಪತ್ರಿಕೆಗಳಲ್ಲಿಯೂ ಸ್ನಾತಕ ಪ್ರಥಮ ಹಾಗೂ ತೃತೀಯ ಷಾಣ್ಮಾಸಿಕದಲ್ಲಿ **80–20** ಹಾಗೂ ಪಂಚಮ ಷಾಣ್ಮಾಸಿಕದಲ್ಲಿ **60–40**, ಹಾಗೂ ಸ್ನಾತಕೋತ್ತರದಲ್ಲಿ **70–30** ಮಾದರಿಯಲ್ಲಿಯೇ ಅಂಕಗಳನ್ನು ನೀಡುವುದು.

6) ಎಲ್ಲ ವಿದ್ಯಾರ್ಥಿಗಳ ಆಂತರಿಕ ಅಂಕಗಳ ಕುರಿತಾದ ದಾಖಲೆಗಳನ್ನು = ಶಾಸ್ತ್ರ ವಿದ್ಯಾರ್ಥಿಗಳ ಅಸೈನ್ಮೆಂಟ್, ಟೆಸ್ಟ್ ಪೇಪರ್, ಪರೀಕ್ಷಾ ಹಾಜರಾತಿ ಪಟ್ಟಿ, ಅಧ್ಯಾಪಕರಿಂದ ದೃಢೀಕರಿಸಿದ ಅಂಕಪಟ್ಟಿ ಇತ್ಯಾದಿ ಹಾಗೂ ವೇದ ವಿದ್ಯಾರ್ಥಿಗಳ ಅಧ್ಯಾಪಕರಿಂದ ದೃಢೀಕರಿಸಿದ ಮೌಖಿಕ ಪರೀಕ್ಷೆಯ ಅಂಕಪಟ್ಟಿ, ಪರೀಕ್ಷಾ ಹಾಜರಾತಿ ಪಟ್ಟಿಗಳನ್ನು ವಿದ್ಯಾಲಯದಲ್ಲಿ ವ್ಯವಸ್ಥಿತವಾಗಿ ಸಂರಕ್ಷಿಸಿಡುವುದು ಕಡ್ಡಾಯವಾಗಿರುತ್ತದೆ.

ಆದೇಶದ ಮೇರೆಗೆ,

ಕುಲಸಚಿವರು (ಮೌಲ್ಯಮಾಪನ) – ಪ್ರ

Registrar (Evaluation)
Karnataka Samskrita Vishwavidyalaya
Bengaluru – 560 018.

ಇವರಿಗೆ :–

1. ನಿರ್ದೇಶಕರು, ಅಧ್ಯಯನಾಂಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು.
2. ಎಲ್ಲಾ ವಿಭಾಗಾಧ್ಯಕ್ಷರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು.
3. ಪ್ರಾಂಶುಪಾಲರು/ಸಂಯೋಜಕರು, ಮಾನ್ಯತೆಗೊಳಪಟ್ಟ ಸಂಸ್ಕೃತ ಮಹಾವಿದ್ಯಾಲಯಗಳು.
4. ಸಿಸ್ಟಮ್ ಅನಾಲಿಸ್ಟ್ – ಅಂತರ್ಜಾಲ ಪುಟದಲ್ಲಿ ಪ್ರಕಟಣೆಗಾಗಿ.

ಪ್ರತಿ :

1. ಸೂಚನಾ ಫಲಕ.
2. ರಕ್ಷಾ ಪ್ರತಿ.